**ದಿನಾಂಕಃ 31.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ಎಂ. ಹೆಚ್. ಕೆ. ವಕೀಲರಿಂದಃ**

1. ನನ್ನ ಜಮೀನಿನ ಸರ್ವೆ ನಂ.295 ಆಗಿರುತ್ತದೆ. ನನ್ನ ಜಮೀನಿನ ದಕ್ಷಿಣಕ್ಕೆ ವಾದಿಯ ಜಮೀನು ಬರುತ್ತದೆ. ವಾದಿಯ ಸರ್ವೆ ನಂ.296/1 ಕ್ಷೇತ್ರ 5 ಎಕರೆ 36 ಗುಂಟೆ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ.296/1 ರ ದಕ್ಷಿಣಕ್ಕೆ ವಾದಿಯ ಅಣ್ಣ-ತಮ್ಮಂದಿರ ಜಮೀನು ಸರ್ವೆ ನಂ.296/2, 296/3 ಬರುತ್ತದೆ ಎಂದರೆ ಸರಿ. ನನ್ನ ಜಮೀನಿನ ಸರ್ವೆ ನಂ.295/1, 295/2 ಮತ್ತು 295/3 ಆಗಿರುತ್ತದೆ ಎಂದರೆ ಸರಿ. ಶಿವೆರೆಡ್ಡಿ ಮತ್ತು ವೆಂಕಟೇಶ ನನ್ನ ಮಕ್ಕಳು ಆಗಬೇಕು.

2. ಸಾಕ್ಷಿಗೆ ನಿಪಿ-5 ನು ತೋರಿಸಿದ್ದು ಸದರಿ ನಿಪಿ-5 ರಲ್ಲಿ ಅತೀಕ್ರಮಣ ಮಾಡಲಾಗಿರುತ್ತದೆ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಒಂದೇ ಪಟ್ಟಿಯನ್ನು ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ 9 ಗುಂಟೆ ಅತೀಕ್ರಮಣ ಮಾಡಲಾಗಿರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. 9 ಗುಂಟೆ ವಾದಿಯ ಮಾಲ್ಕಿ ಜಮೀನು ಎಂದರೆ ಸಾಕ್ಷಿಯು ವಾದಿಯ ಎಲ್ಲ ಜಮೀನನ್ನು ಅಳತೆ ಮಾಡಿದರೆ ಅತೀಕ್ರಮಣ ಮಾಡಿದ ಬಗ್ಗೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಕಬ್ಜಾ ವಹಿವಾಟಿಯಲ್ಲಿ 70-80 ವರ್ಷಗಳಿಂದ ನಾವೆ ಇರುತ್ತವೇವೆ ಎಂದು ನುಡಿಯುತ್ತಾರೆ.

3. ನಾನು ಬೇಕಾಯ್ದೆಶೀರ ಅತೀಕ್ರಮಣ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಅಜ್ಜನ ಕಾಲದಿಂದಲು ಸಾಗೂಳಿ ಮಾಡಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಅತೀಕ್ರಮಣ ಮಾಡಿದ ಬಗ್ಗೆ ಪಿ.ಟಿ. ಶೀಟ ತಯಾರಿಸಿದ ನಂತರ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಸರ್ವೆ ಮಾಡಿದಾಗ ಅತೀಕ್ರಮಣ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ಮಾಡಿದ ನಂತರ ವಾದಿ ದಾವೆ ಮಾಡಿದ ನಂತರ ನನಗೆ ನೋಟಿಸ ಬಂದಿರುತ್ತದೆ. ನಿಪಿ-5 ತಪ್ಪಾಗಿದೆ ಎಂದು ಪ್ರಶ್ನಿಸಿ ಮೇಲಾಧಿಕಾರಿಗಳಿಗೆ ಅಫೀಲು

ಸಲ್ಲಿಸಿರುವುದಿಲ್ಲ. ವಾದಿಯು ತನ್ನ ಜಮೀನನ್ನು ಮಾತ್ರ ಅಳತೆ ಮಾಡಿದ್ದು, ತನ್ನ ಅಣ್ಣ-ತಮ್ಮಂದಿರ ಜಮೀನನ್ನು ಅಳತೆ ಮಾಡದೆ ಸರ್ವೆ ಮಾಡಿಸಿರುತ್ತಾರೆ ಎಂದು ಪ್ರಶ್ನಿಸಿ ಅಫೀಲು ಸಲ್ಲಿಸಿರುವುದಿಲ್ಲ.

4. ಸರ್ವೆ ನಂ.296/1 ಹದ್ದುಬಸ್ತು ಗುರುತಿಸಬೇಕೆಂದು ವಾದಿಯು ವಾದಿಯು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ವಾದಿಯು ಅರ್ಜಿ ಸಲ್ಲಿಸಿದ ನಂತರ ನಮಗೆ ಮತ್ತು ಸಂಬಂಧಪಟ್ಟವರಿಗೆ ನೋಟಿಸ ನೀಡಿರುತ್ತಾರೆ ಎಂದರೆ ಸರಿ. ದಿಃ 26.07.2018 ರಂದು ಸರ್ವೆಯರ ಜಮೀನಿಗೆ ಬಂದು ಅಳತೆ ಮಾಡಿರುತ್ತಾನೆ ಎಂದರೆ ಸರಿ. ಸರ್ವೆಯರ ಅಳತೆ ಮಾಡಿ ನಿಪಿ-5 ನು ತಯಾರಿಸಿದಕ್ಕೆ ತಕರಾರನ್ನು ಸಲ್ಲಿಸಿರುವುದಿಲ್ಲ. ನಿಪಿ-5 ರದ್ದು ಆಗಿಲ್ಲ ಎಂದರೆ ಸರಿ. ವಾದಿಯ 9 ಗುಂಟೆ ಜಮೀನನ್ನು ಅತೀಕ್ರಮಣ ಮಾಡಿದ್ದನ್ನು ಹಿಂದಿರುಗಿಸಿ ಕೊಡಬೇಕಾಗುತ್ತದೆ ಎಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**